# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 219 | Pages. 2 | Date: 09-08-2026, SUNDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 219 - ಪುಟಗಳು : 2 | 09-08-2026 | ಭಾನುವಾರ | Ph: 8762954248 | ದರ : ₹1


## ಬಗರ್ ಹುಕುಂ: ಸಿಐಡಿ ತನಿಖೆಗೆ ಆಕ್ಷೇಪ

### ಸ್ಥಳೀಯ ಪೊಲೀಸರಿಂದ ತನಿಖೆ ನಡೆದರೆ ರೈತರಿಗೆ ನೆಮ್ಮದಿ ಎಂದ ಶಿವರಾಂ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಬಗರ್ ಹುಕುಂ ಯೋಜನೆ ಅಕ್ರಮ ಮಂಜೂರು ಪ್ರಕರಣವನ್ನು ಸಿಐಡಿಗೆ ವಹಿಸುವ ಬದಲು ಸ್ಥಳೀಯ ಪೊಲೀಸರೇ ತನಿಖೆ ಮಾಡಬಹುದಿತ್ತು. ಈ ನಿಟ್ಟಿನಲ್ಲಿ ಸರ್ಕಾರ ನಿರ್ಧಾರ ಕೈಗೊಳ್ಳಬೇಕು ಎಂದು ಮಾಜಿ ಸಚಿವ ಬಿ.ಶಿವರಾಂ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿ, ಬೇಲೂರು ಮಾತ್ರವಲ್ಲದೆ ಕಳಸ, ಕಡೂರು ಸೇರಿ ರಾಜ್ಯದ ಹಲವೆಡೆ ಅಕ್ರಮ ಮಂಜೂರು ಪ್ರಕರಣ ಸಂಬಂಧ ಎಫ್ಐಆರ್ ದಾಖಲಾಗಿದೆ. ಆದರೆ ಸ್ಥಳೀಯ ಪೊಲೀಸರೇ ವಿಚಾರಣೆ ಕೈಗೆತ್ತಿಕೊಂಡಿದ್ದಾರೆ. ಆದರೆ 2025ರ ಜ. 4ರಂದು ಜಿಲ್ಲಾಧಿಕಾರಿ ಆಗಿದ್ದ ಸತ್ಯಭಾಮ ಅವರು ವಿಚಾರಣೆ ವಿಳಂಬವಾಗುತ್ತಿದೆ ಎಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗೆ ಪತ್ರ ಬರೆದು ಸಿಐಡಿ ತನಿಖೆಗೆ ಕೋರಿದರು. ಹೈಕೋರ್ಟ್ ಹಾಗೂ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವೇ ಪೊಲೀಸರಿಂದ ತನಿಖೆ ನಡೆಸಬೇಕೆಂದು ಹೇಳಿದರೂ ಸಿಐಡಿಗೆ ಜವಾಬ್ದಾರಿ ವಹಿಸಿದ್ದು ಏಕೆ ಎಂಬ ಪ್ರಶ್ನೆ ಕಾಡುತ್ತಿದೆ. ಮಾಜಿ ಶಾಸಕ ಕೆ.ಎಸ್.ಲಿಂಗೇಶ್ ಅವರನ್ನು ಮಹಾಅಪರಾಧಿ ಎಂಬಂತೆ ಬಿಂಬಿಸಿ ಬಂಧಿಸಲಾಗಿದೆ. ನನ್ನ ಅವಧಿಯಲ್ಲೂ 40 ಸಾವಿರ ಎಕರೆ ಮಂಜೂರು ಪ್ರಕ್ರಿಯೆ ನಡೆದಿದೆ. ಎಲ್ಲಾ ಅವಧಿಯಲ್ಲಿ ಶೇ. 10 ರಷ್ಟು ಲೋಪಗಳಾಗಿರುತ್ತವೆ. ಹಾಗೆಂದ ಮಾತ್ರಕ್ಕೆ ಶಿಕ್ಷೆಗೆ ಗುರಿಪಡಿಸುತ್ತಾ ಹೋದರೆ ರೈತರ ಗತಿ ಏನು. ಈಗ ಸಾಗುವಳಿ ಮಾಡುತ್ತಿರುವ ಭೂಮಿಯನ್ನು ವಾಪಸ್ ಪಡೆಯಲು ಸರ್ಕಾರಕ್ಕೆ




ಸಾಧ್ಯವಿದೆಯೇ ಎಂದು ಪ್ರಶ್ನಿಸಿದರು.

ತನಿಖೆ ನಡೆಸುತ್ತಿರುವ ಸಿಐಡಿ ಹಾಲಿ 1430 ಪ್ರಕರಣಗಳಿಗೆ ನೋಟಿಸ್ ನೀಡಿದೆ. ರೈತ ಸಮುದಾಯ, ರೈತರನ್ನು ಕೊಲೆಗಾರರಂತೆ ಕಾಣುತ್ತಿದೆ. ಸಿಐಡಿ ನೋಟಿಸ್‌ನಿಂದ ಆತಂಕ ಮನೆ ಮಾಡಿದ್ದು, ಉಸ್ತುವಾರಿ ಸಚಿವರು ಸರ್ಕಾರದ ಗಮನಕ್ಕೆ ತಂದು ಸಿಐಡಿಯಿಂದ ವಾಪಸ್ ಪಡೆದು, ಪೊಲೀಸ್ ತನಿಖೆಯನ್ನೇ ಮುಂದುವರಿಸಲಿ ಎಂದು ಒತ್ತಾಯಿಸಿದರು.

ಪೊಲೀಸರೇ ತನಿಖೆ ಕೈಗೆತ್ತಿಕೊಂಡಿದ್ದರೆ ಇಷ್ಟೊತ್ತಿಗೆ ಮುಗಿಯುತಿತ್ತು. ಆದರೆ ಸಿಐಡಿ ತನಿಖೆ ಮುಗಿಯುತ್ತಿಲ್ಲ, ನೋಟೀಸ್ ನೀಡುವುದು ತಪ್ಪಿಲ್ಲ, ಈ ನಡುವೆ ಕೆಲ ರೈತರ ಜಮೀನು ಮುಟ್ಟುಗೋಲು ಹಾಕಿಕೊಂಡಿದ್ದಾರೆ ಎಂದು ಆರೋಪಿಸಿದರು.

ಮಾಜಿ ಶಾಸಕ ಕೆ.ಎಸ್.ಲಿಂಗೇಶ್ ಅವರ ಅವಧಿಯಲ್ಲಿ ಹಗರಣವೇ ನಡೆದಿಲ್ಲ. ಮಾಡದ ತಪ್ಪಿಗೆ 2 ತಿಂಗಳಿಂದ ಬಂಧನದಲ್ಲಿದ್ದಾರೆ. ಬಹುಶಃ ಸಿಂಪತಿ ಪಡೆಯಲು ಹೀಗೆ ಮಾಡುತ್ತಿರಬಹುದು. ಅವರ ಬಗ್ಗೆ ಕ್ಷೇತ್ರದ ಜನರು ಸಿಂಪತಿ ವ್ಯಕ್ತಪಡಿಸುತ್ತಿದ್ದಾರೆ. ಲಿಂಗೇಶ್ ಅವರು ಜಾಮೀನು ಪಡೆಯಲು ಪ್ರಯತ್ನ ಮಾಡುತ್ತಿಲ್ಲ ಎಂದರು.

ಕಾಡಾನೆ ಭಾರೀ ಆತಂಕ ಬಹುಶಃ ಜಿಲ್ಲೆಯಲ್ಲಿ ಮಾತ್ರವಲ್ಲ, ಬೇರೆಡೆಯೂ ಇದೆ. ಆದರೂ ಶಾಶ್ವತ ಪರಿಹಾರ ಕಂಡು ಹಿಡಿಯಲಾಗಿಲ್ಲ. ಇದ್ದಲ್ಲಿಯೇ ಆನೆಗಳಿಗೆ ಬೇಕಾದ ಬಿದಿರುವ, ನೀರು ಇತ್ಯಾದಿ ಸೌಲಭ್ಯ ನೀಡಿದರೆ ಅವು ಕಾಡಿನಿಂದ ನಾಡಿಗೆ ಬರುವುದು ತಪ್ಪುತ್ತದೆ. ಇಲ್ಲದಿದ್ದರೆ ಸಾವು-ನೋವು ಪರಿಹಾರ ನೀಡಿಕೆ ಪ್ರಕ್ರಿಯೆ ಹೀಗೆ ಮುಂದುವರಿಯಲಿದೆ. ಟಾಸ್ಕ್ ಫೋರ್ಸ್ ಮಾಡಿದರೂ, ಬೆಳೆನಷ್ಟ, ಜೀವಹಾನಿ ನಿಂತಿಲ್ಲವೆಂದು ಬೇಸರ ವ್ಯಕ್ತಪಡಿಸಿದರು.

> ಕೆ.ಎನ್.ರಾಜಣ್ಣ, ಕೃಷ್ಣಬೈರೇಗೌಡ ಸಚಿವರಾಗಿದ್ದರೂ ಯಾವುದೇ ಬದಲಾವಣೆ ಆಗಲಿಲ್ಲ. ಅವರು ಯಾರ ಮಾತು ಕೇಳುತ್ತಿದ್ದರು ಎಂಬುದು ನಮಗೆ ಗೊತ್ತಾಗುತ್ತಿರಲಿಲ್ಲ. ಈ ಸಂಬಂಧ ನಾನು ಜಿಲ್ಲಾಧಿಕಾರಿ ಎದುರೇ ಗಲಾಟೆ ಮಾಡಿದ್ದೇನೆ. ಸ್ಥಳೀಯರೇ ಆಗಿರುವ ಕೆ.ಎಂ.ಶಿವಲಿಂಗೇಗೌಡ ಸಚಿವರಾಗಿರುವುದರಿಂದ ನಿರೀಕ್ಷೆಗಳು ಹೆಚ್ಚಿವೆ. ಅವರ ಕಾರ್ಯವೈಖರಿ ಹೇಗೆಂದು ತಿಳಿಯಲು ಸ್ವಲ್ಪ ಸಮಯ ಬೇಕಾಗುತ್ತದೆ.
>
> **- ಬಿ.ಶಿವರಾಂ, ಮಾಜಿ ಸಚಿವ**

#### ಶಿವಲಿಂಗೇಗೌಡರ ಮೇಲೆ ನಿರೀಕ್ಷೆ ಹೆಚ್ಚಿದೆ

ಸ್ಥಳೀಯರಿಗೆ ಜಿಲ್ಲೆಯ ಉಸ್ತುವಾರಿ ಸಚಿವರಾಗಿರುವುದರಿಂದ ಅವರ ಮೇಲೆ ನಿರೀಕ್ಷೆಗಳು ಹೆಚ್ಚಿವೆ. ಬಗರ್ ಹುಕುಂ ಮಂಜೂರಾತಿ, ಕಾಡಾನೆ ಸಮಸ್ಯೆ ಬಗ್ಗೆ ಜನರು ಅವರ ಗಮನಕ್ಕೆ ತಂದಿದ್ದಾರೆ. ಸಚಿವರ ಬರ ಅಧ್ಯಯನ ಪ್ರವಾಸವನ್ನು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರೂ ಸ್ವಾಗತಿಸಿದ್ದಾರೆ. ಸಚಿವ ಶಿವಲಿಂಗೇಗೌಡರಿಗೆ ನಮ್ಮ ಸಹಕಾರ ಯಾವಾಗಲೂ ಇರುತ್ತದೆ. ಅವರು ಒಳ್ಳೆಯ ಕೆಲಸ ಮಾಡಲಿ, ಹೊರಗಿನವರಿಗಿಂತ ನಮ್ಮವರು ಉಸ್ತುವಾರಿ ಸಚಿವರಾಗುವುದು ಸಂತಸದ ಸಂಗತಿ ಎಂದರು.

## ಮುನಿಯಪ್ಪಗೆ ಸಮಾಜ ಕಲ್ಯಾಣ ಖಾತೆ ನೀಡಲು ಆಗ್ರಹ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಾದಿಗ ಸಮುದಾಯದ ಹಿರಿಯ ಸಚಿವ ಕೆ.ಹೆಚ್.ಮುನಿಯಪ್ಪ ಅವರ ವಿರುದ್ಧ ನಡೆಯುತ್ತಿರುವ ರಾಜಕೀಯ ಪಿತೂರಿ, ಬೆಳವಣಿಗೆಗಳ ಬಗ್ಗೆ ಕರ್ನಾಟಕ ಮಾದರ ಮಹಾಸಭಾ ಜಿಲ್ಲಾ ಘಟಕ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ಕಾಂಗ್ರೆಸ್ ಸರ್ಕಾರ ದಲಿತರ ಉದ್ಧಾರ ಎಂದು ಅವರ ಮೆಟ್ರೆ ಮುರಿಯೋ ಕೆಲಸ ಮಾಡುತ್ತಿದೆ ಎಂದು ಕಿಡಿಕಾರಿದೆ.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಮಹಾಸಭಾದ ಜಿಲ್ಲಾಧ್ಯಕ್ಷ ಟಿ.ಆರ್.ವಿಜಯಕುಮಾರ್, ಮುನಿಯಪ್ಪ ಅವರು ಹಿರಿಯ ನಾಯಕರಾಗಿದ್ದು, ಏಳು ಬಾರಿ ಸಂಸದರಾಗಿದ್ದಾರೆ. ಎರಡು ಬಾರಿ ಕೇಂದ್ರ ಸಚಿವರಾಗಿದ್ದಾರೆ. ಅವರಿಗೆ ಸಾಕಷ್ಟು ಅನುಭವ ಇದೆ. ಆದರೂ ಅವರಿಗೆ ಪ್ರಬಲ ಖಾತೆ ನೀಡಲು ಮೀನಾಮೇಷ ಎಣಿಸಲಾಗುತ್ತಿದೆ.

ಹಾಲಿ ಮುನಿಯಪ್ಪ ಅವರಿಗೆ ನೀಡಿರುವ ಆಹಾರ ಖಾತೆಯನ್ನು ಬದಲಾವಣೆ ಮಾಡಬೇಕು. ಸಮಾಜ ಕಲ್ಯಾಣ ಖಾತೆ ಕೊಡಬೇಕು. ಅದರ ಜೊತೆಗೆ ಡಿಸಿಎಂ ಹುದ್ದೆಯನ್ನೂ ನೀಡಬೇಕು ಎಂದು ಒತ್ತಾಯಿಸಿದರು.

ಆದರೆ ಮುನಿಯಪ್ಪ ಅವರ ಸಚಿವ ಸ್ಥಾನ ಬೇರೊಬ್ಬರಿಗೆ ಹೋಗಲಿದೆ ಎಂದೆಲ್ಲ ಗುಲ್ಲೆಬ್ಬಿಸಲಾಗುತ್ತಿದೆ. ಆದರೂ ಮಾಜಿ ಸಿಎಂ ಸಿದ್ದರಾಮಯ್ಯ ಅವರಾಗಲೀ, ಕೆಪಿಸಿಸಿ ಅಧ್ಯಕ್ಷರಾಗಲೀ ಯಾರೊಬ್ಬರೂ ಮಾತನಾಡದೇ ಇರುವುದು ದುರದೃಷ್ಟಕರ ಎಂದರು.

ಇಷ್ಟೆಲ್ಲ ಆದರೂ ಮುನಿಯಪ್ಪ ಸಹ ಮೌನವಾಗಿದ್ದಾರೆ. ಅವರು ಮಾತನಾಡಬೇಕು. ಪ್ರಬಲ ಖಾತೆಗೆ ಒತ್ತಡ ಹೇರಬೇಕು. ಇವರ ಮನವಿಗೆ ಸರ್ಕಾರದ ಕಡೆಯಿಂದ ಮನ್ನಣೆ ಸಿಗದೇ ಇದ್ದರೆ ಕೂಡಲೇ ರಾಜೀನಾಮೆ ನೀಡಿ ಪಕ್ಷದಿಂದ ಹೊರ ಬರಬೇಕು ಎಂದು ಒತ್ತಾಯಿಸಿದರು.

ಮುನಿಯಪ್ಪ ಅವರನ್ನು ಸಚಿವ ಸಂಪುಟದಲ್ಲಿ ಮುಂದುವರಿಸಬೇಕು. ಹಾಲಿ ಖಾತೆಯನ್ನು ಬದಲಾವಣೆ ಮಾಡಿ, ಸಮಾಜ ಕಲ್ಯಾಣ ಖಾತೆ ನೀಡಬೇಕು. ಎಡಗೈ ಸಮುದಾಯಕ್ಕೆ ನ್ಯಾಯ ಸಮ್ಮತ ಹಾಗೂ ಗೌರವಯುತ ರಾಜಕೀಯ ಪ್ರಾತಿನಿಧ್ಯ ನೀಡಬೇಕು. ಮುನಿಯಪ್ಪ ಅವರ ಹಿರಿತನಕ್ಕೆ ಯಾವುದೇ ಧಕ್ಕೆ ಆಗುವ ರೀತಿಯಲ್ಲಿ ಯಾವುದೇ ಕ್ರಮ ಕೈಗೊಳ್ಳಬಾರದು ಎಂದು ಎಚ್ಚರಿಸಿದರು.

ಮಹಾಸಭಾದ ಮುನಿಸ್ವಾಮಿ ತಿರುಪತಿಹಳ್ಳಿ, ದೇವರಾಜು, ಸೋಮಶೇಖರ್, ಚಂದ್ರ, ಕುಶಾಲ್ ಇದ್ದರು.

## ಕಾಂಗ್ರೆಸ್ ಅತೃಪ್ತ ಶಾಸಕರಿಗೆ ಜೆಡಿಎಸ್ ಗಾಳ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸಚಿವ ಸ್ಥಾನ ಸಿಗದೆ ಹತಾಶರಾಗಿರುವ ಶಾಸಕರಿಗೆ ಜೆಡಿಎಸ್ ಬಾಗಿಲು ತೆರೆದಿದೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

ಹೊಳೆನರಸೀಪುರ ತಾಲ್ಲೂಕಿನ ಮಾವಿನಕೆರೆ ಬೆಟ್ಟದ ತಪ್ಪಲಿನ ತಾಯಿ ಚನ್ನಮ್ಮನವರ ಸಮಾಧಿ ಸ್ಥಳದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್‌ನ ಶಾಸಕರು ಪಕ್ಷದಲ್ಲಿ ಮುಂದುವರಿಯಬೇಕೇ ಅಥವಾ ಬೇಡವೇ ಎಂಬ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳುತ್ತಿದ್ದಾರೆ. ಹಿರಿಯರು, ಕಿರಿಯರು ಎನ್ನುವುದಕ್ಕಿಂತ ಸಾರ್ವಜನಿಕವಾಗಿ ಭಯಭಕ್ತಿ ಇಟ್ಟುಕೊಂಡು ಜನರಿಗೆ ಗೌರವ ನೀಡುವ ಉತ್ತಮ ಶಾಸಕರು ಕಾಂಗ್ರೆಸ್‌ನಲ್ಲಿದ್ದಾರೆ. ಆದರೆ, ಪಕ್ಷ ನಿಷ್ಠೆ, ಬಲವಂತ ಅಥವಾ ಅನಿವಾರ್ಯತೆಯಿಂದಾಗಿ ಅವರು ಕಾಂಗ್ರೆಸ್‌ನಲ್ಲಿದ್ದಾರೆ ಎಂದರು.

ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಇತ್ತೀಚಿನ ಬೆಳವಣಿಗೆಗಳನ್ನು ಗಮನಿಸುತ್ತಿರುವ ಕೆಲ ಶಾಸಕರು, ಜನರ ಬಗ್ಗೆ ಭಯಭಕ್ತಿ ಇಟ್ಟುಕೊಂಡಿರುವ ತಾವು ಪಕ್ಷದಲ್ಲಿ ಮುಂದುವರಿಯುವುದು ಸರಿಯೋ, ತಪ್ಪೋ ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳುತ್ತಿದ್ದಾರೆ. ಈ ಕುರಿತು ನನಗೆ ಮಾಹಿತಿಯಿದೆ. ಅವರ ಆತ್ಮಾವಲೋಕನ ಮುಂದೆ ಯಾವ ರೀತಿಯ ಬದಲಾವಣೆ ತರಲಿದೆ ಎಂಬುದನ್ನು ಕಾದು ನೋಡೋಣ ಎಂದು ಹೇಳಿದರು. ಮೂರ್ನಾಲ್ಕು ಮಂದಿಗೆ ಸಚಿವ ಸ್ಥಾನ ನೀಡಿದ ಮಾತ್ರಕ್ಕೆ ಜೆಡಿಎಸ್‌ಗೆ ದೊಡ್ಡ ಮಟ್ಟದ ನಷ್ಟವಾಗುತ್ತದೆ ಎಂದು ನಾನು ಭಾವಿಸುವುದಿಲ್ಲ. ಜೆಡಿಎಸ್ ಬಿಟ್ಟು ಹೋದವರು, ಪಕ್ಷದಲ್ಲಿ ಉಳಿದವರು ಎಂಬ ಪ್ರಶ್ನೆಯೂ ಇಲ್ಲ. ಜೆಡಿಎಸ್ ಪಕ್ಷವನ್ನು ಮುಗಿಸುತ್ತೇನೆ ಎಂದು ಯಾರಾದರೂ ಭಾವಿಸಿದ್ದರೆ, ಅದು ಅವರ ಕನಸು ಎಂದು ವ್ಯಂಗ್ಯವಾಡಿದರು. ಜೆಡಿಎಸ್ ಸಣ್ಣ ಪಕ್ಷವಾಗಿರಬಹುದು. ಪಕ್ಷದ ಖಜಾನೆಯಲ್ಲಿ ದೊಡ್ಡ ಪ್ರಮಾಣದ ಹಣ ಇಲ್ಲ . ಆದರೆ, ಹಣವಿಲ್ಲದಿದ್ದರೂ ಜನಬಲದಿಂದ ರಾಷ್ಟ್ರೀಯ ಪಕ್ಷಗಳೊಂದಿಗೆ ಸ್ಪರ್ಧಿಸುವ ಶಕ್ತಿ ಜೆಡಿಎಸ್‌ಗೆ ಇದೆ. ಪಕ್ಷವನ್ನು ಬೆಳೆಸಿ ಉಳಿಸಿಕೊಂಡು ಬಂದಿರುವ ಜನರ ಒಂದು ವರ್ಗವಿದೆ. ಅವರಿಂದಲೇ ಪಕ್ಷ ಮತ್ತಷ್ಟು ವೃದ್ಧಿಯಾಗಲಿದೆ ಹೊರತು, ಪಕ್ಷವನ್ನು ಯಾರಿಂದಲೂ ಕಡಿಮೆ ಮಾಡಲು ಸಾಧ್ಯವಿಲ್ಲ. ಜೆಡಿಎಸ್‌ನ್ನು ಮುಗಿಸುವುದೇ ತಮ್ಮ ಮೊದಲ ಕಾರ್ಯಕ್ರಮ ಎಂದು ಕೆಲವರು ಹೇಳುತ್ತಿದ್ದಾರೆ. ಆದರೆ, ಮುಂದಿನ ದಿನಗಳಲ್ಲಿ ನೋವಿನಲ್ಲಿರುವವರ ನೋವಿಗೆ ಪರಿಹಾರ ನೀಡುವ ಕೆಲಸವನ್ನು ಜೆಡಿಎಸ್ ಮಾಡಲಿದೆ ಎಂದರು.

## ಸಮಾಜದ ಸ್ವಾಸ್ಥ್ಯ ಕಾಪಾಡುವುದು ಎಲ್ಲರ ಜವಾಬ್ದಾರಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಸದೃಢ ಸಮಾಜ ನಿರ್ಮಾಣ ಪ್ರತಿಯೊಬ್ಬರ ಜವಾಬ್ದಾರಿಯಾಗಿದ್ದು ಯುವಕರು ದೇಶದ ಶಕ್ತಿಯಾಗಬೇಕೆ ಹೊರತು ಹೊರೆಯಾಗಬಾರದು ಎಂದು ಹಿರೀಸಾವೆ ಪಿಎಸ್ಐ ರೂಪದೇವಿ ಬಿರಾದಾರ್ ಹೇಳಿದರು.

ತಾಲ್ಲೂಕಿನ ಹಿರೀಸಾವೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಚನ್ನರಾಯಪಟ್ಟಣ ರೋಟರಿ ಕ್ಲಬ್ ಸಹಯೋಗದಲ್ಲಿ ಶನಿವಾರ ಆಯೋಜಿಸಿದ್ದ ರಸ್ತೆ ಸುರಕ್ಷತೆ ಮತ್ತು ಮಾದಕ ವಸ್ತುಗಳ ದುಷ್ಪರಿಣಾಮಗಳ ಕುರಿತ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿ, ಮಾದಕ ವಸ್ತುಗಳ ಬಳಕೆ ಯುವ ಸಮುದಾಯಗಳ ಬದುಕಿಗೆ ಮಾರಕ ಎಂದರು.

ಮೊದಲೆಲ್ಲಾ ನಗರ ಪ್ರದೇಶಗಳಲ್ಲಿ ಮಾತ್ರ ದೊರೆಯುತ್ತಿದ್ದ ಮಾದಕ ವಸ್ತುಗಳು ಇತ್ತೀಚಿನ ದಿನಗಳಲ್ಲಿ ಗ್ರಾಮೀಣ ಭಾಗದಲ್ಲಿಯೂ ಸುಲಭವಾಗಿ ಸಿಗುತ್ತಿದೆ. ಇದು ಅಪಾಯದ ಮುನ್ಸೂಚನೆಯಾಗಿದ್ದು ಶೈಕ್ಷಣಿಕ ವ್ಯವಸ್ಥೆಯ ಮೇಲೆ ಪರಿಣಾಮ ಬೀರಲಿದೆ ಎಂದು ಆತಂಕ ವ್ಯಕ್ತಪಡಿಸಿದರು.




ಹಿರೀಸಾವೆ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಶಿವಸ್ವಾಮಿ ಮಾತನಾಡಿ, ಗಾಂಜಾ, ಡ್ರಗ್ಸ್‌ನಂತಹ ವಸ್ತುಗಳ ಬಳಕೆಯು ಆರೋಗ್ಯಕ್ಕೆ ಹಾನಿಕಾರಕವಾಗಲಿದೆ. ಕ್ಷಣಿಕ ಸುಖಕ್ಕಾಗಿ ಸಿಗರೇಟ್ ಸೇವನೆ ಮಾಡಿದರೆ ಅದರಿಂದ ಆತನ 20 ಸೆಕೆಂಡ್ ಆಯಸ್ಸು ಕಡಿಮೆಯಾಗುತ್ತದೆಂಬುದು ಸಂಶೋಧನೆಯಿಂದ ತಿಳಿದುಬಂದಿದೆ. ಧೂಮಪಾನ, ಮದ್ಯಪಾನ ಹಾಗೂ ಮಾದಕ ವಸ್ತುಗಳ ಬಳಕೆಯ ಬದಲಾಗಿ ಹಣ್ಣು, ತರಕಾರಿ ಹಾಗೂ ಪೌಷ್ಟಿಕ ಆಹಾರಗಳ ಸೇವನೆ ಮಾಡುವ ಮೂಲಕ ಆರೋಗ್ಯ ಕಾಪಾಡಿಕೊಳ್ಳಬೇಕು. ಅದರಿಂದ ಸಮಾಜವೂ ಆರೋಗ್ಯದಿಂದ ಇರುತ್ತದೆಂದು ಸಲಹೆ ನೀಡಿದರು.

ವೃತ್ತ ನಿರೀಕ್ಷಕ ಮಂಜೇಗೌಡ ಮಾತನಾಡಿ, 18 ವರ್ಷ ತುಂಬದ ಮಕ್ಕಳಿಗೆ ದ್ವಿಚಕ್ರ ಹಾಗು ಇತರೆ ವಾಹನಗಳನ್ನು ಚಾಲನೆ ಮಾಡಲು ನೀಡುವುದು ಕಾನೂನು ಬಾಹಿರ. ಹೆಲ್ಮೆಟ್ ಧರಿಸದೆ ಹಾಗು ಪರವಾನಗಿ ಜೊತೆಗೆ ವಿಮೆ ಹೊಂದಿಲ್ಲದಿದ್ದರೆ ಅಪಘಾತ ನಡೆದ ಸಂದರ್ಭದಲ್ಲಿ ಕಾನೂನು ತೊಡಕು ಉಂಟಾಗಲಿದೆ. ಸಂಚಾರ ನಿಯಮಗಳನ್ನು ಎಲ್ಲರೂ ಕಡ್ಡಾಯವಾಗಿ ಪಾಲಿಸಬೇಕೆಂದರು.

ರೋಟರಿ ಅಧ್ಯಕ್ಷ ಹೆಚ್.ಎನ್. ಶಿವನಂಜೇಗೌಡ ಮಾತನಾಡಿ, ಶೈಕ್ಷಣಿಕ, ಸಾಮಾಜಿಕ ಹಾಗೂ ಆರ್ಥಿಕವಾಗಿ ಸೇವೆ ಮಾಡುವುದು ರೋಟರಿ ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ತಾಲ್ಲೂಕಿನಾದ್ಯಂತ ಶಾಲಾ ಕಾಲೇಜುಗಳಿಗೆ ಭೇಟಿ ನೀಡಿ ಅಗತ್ಯ ಪರಿಕರಗಳನ್ನು ನೀಡುವುದರ ಜೊತೆಗೆ ಇಂತಹ ಜಾಗೃತಿ ಮೂಡಿಸುವ ಕಾರ್ಯಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ರೋಟರಿ ವತಿಯಿಂದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ 5 ಸಿಮೆಂಟ್ ಬೆಂಚ್‌ಗಳನ್ನು ನೀಡಲಾಯಿತು. ನಿಂಬೆಹಳ್ಳಿ ಮಂಜುನಾಥ ಅವರು ಕಾಲೇಜು ಆವರಣಕ್ಕೆ ತಂತಿಬೇಲಿ ನಿರ್ಮಿಸಿ ಕೊಡುವುದಾಗಿ ತಿಳಿಸಿದರು.

ರೋಟರಿ ಕ್ಲಬ್ ಕಾರ್ಯದರ್ಶಿ ಹರೀಶ್, ಸದಸ್ಯರಾದ ಸಿ.ಎನ್.ನವೀನ್, ಬಿ.ಬಿ.ವಿಜಯ್, ಪದ್ಮನಾಭ, ಎನ್.ಮಂಜುನಾಥ್, ರಾಜು, ಕಿಶೋರ್, ಪ್ರಾಧ್ಯಾಪಕ ಹೆಚ್.ಜೆ.ಹರೀಶ್, ಮಂಜುನಾಥ್, ಕುಮಾರ್, ಆಶಾರಾಣಿ ಹಾಗೂ ವಿದ್ಯಾರ್ಥಿಗಳು ಇದ್ದರು.

## ಕಾಳಿಕಾಂಬ ದೇಗುಲದಲ್ಲಿ ಕಡೆಯ ಆಷಾಢ ಪೂಜೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಶ್ರೀ ಕ್ಷೇತ್ರ ಕಾಳಿಕಾಂಬ ಕಮಠೇಶ್ವರ ದೇವಾಲಯದಲ್ಲಿ ಆಷಾಢ ಮಾಸದ ಕಡೆಯ ಶುಕ್ರವಾರದ ಅಂಗವಾಗಿ ರಂಗ ಪೂಜೆ ಸೇವೆ ಸಲ್ಲಿಸಲಾಯಿತು.

ಪುರೋಹಿತ ಎನ್. ಪ್ರವೀಣ್ ಕುಮಾರ್ ಮಾತನಾಡಿ, ದೇವರ ಸನ್ನಿಧಿಯಲ್ಲಿ ರಂಗವನ್ನು ಸಿದ್ಧಪಡಿಸಿ ಶಕ್ತಿ ಸ್ವರೂಪಿಣಿಯಾದ ದೇವಿಯನ್ನು ಆಹ್ವಾನಿಸಿ ಭಕ್ತಿ, ಶ್ರದ್ಧೆ ಮತ್ತು ಸಮರ್ಪಣೆಯೊಂದಿಗೆ ದೀಪ ನೈವೇದ್ಯಗಳೊಂದಿಗೆ ನಡೆಯುವ ಮಂಗಳಕರ ಆರಾಧನೆಯೇ ರಂಗಪೂಜೆ ಸೇವೆ ಎಂದರು.

ಈ ಮಾಸದಲ್ಲಿ ಶಿವಶಕ್ತಿಯ ಸ್ವರೂಪವಾದ ದೇವಿಯ ಆರಾಧನೆಯಿಂದ ಶುಭ ಫಲಗಳನ್ನು ಪಡೆಯಬಹುದು. ಆಷಾಢ ಮಾಸದ ಕಡೆಯ ಶುಕ್ರವಾರ ವಿಶೇಷವಾಗಿ ಲಕ್ಷ್ಮಿಯು ನಮ್ಮ ಬೇಡಿಕೆಗಳನ್ನು ಆಲಿಸುತ್ತಾಳೆ ಎಂದು ಶಾಸ್ತ್ರಗಳಲ್ಲಿ ಹೇಳಲಾಗಿದೆ ಎಂದರು.

ವಿಶೇಷ ಅಲಂಕಾರ ಸಹಿತ ಪೂಜೆ, ಪ್ರಾಕಾರೋತ್ಸವ ಸೇವೆ, ರಂಗಪೂಜೆ ಮತ್ತು ಅನ್ನಸಂತರ್ಪಣೆ ಸೇವಾರ್ಥದಾರರಾದ ಹೆಚ್.ಎಂ.ಜ್ಯೋತಿ ಮತ್ತು ಹೆಚ್.ಕೆ.ಸತೀಶ್ ದಂಪತಿಯನ್ನು ಕ್ಷೇತ್ರದ ವತಿಯಿಂದ ಸಾಂಪ್ರದಾಯಿಕವಾಗಿ ಗೌರವಿಸಲಾಯಿತು.

ಮಹಿಳೆಯರಿಂದ ಭಜನೆ ಹಾಗೂ ಕು. ವಿಸ್ಮಿತ ಮತ್ತು ಹೆಚ್.ಎ.ಹಿಮ ಭರತನಾಟ್ಯ ಪ್ರದರ್ಶಿಸಿದರು.

ಜಿಲ್ಲಾ ವಿಶ್ವಕರ್ಮ ಸಮಾಜದ ಅಧ್ಯಕ್ಷ ಹೆಚ್.ವಿ.ಹರೀಶ್, ನಿರ್ದೇಶಕ ಜಿ.ಎಸ್.ಜಯರಾಜು, ವೈ. ಮಧುಕುಮಾರ್, ಪೂಜಾ ಸಮಿತಿಯ ಅಧ್ಯಕ್ಷ ಹೆಚ್.ಕೆ.ಆನಂದ್, ತಾಲ್ಲೂಕು ವಿಶ್ವಕರ್ಮ ಸಮಾಜದ ಪ್ರಧಾನ ಕಾರ್ಯದರ್ಶಿ ಹೆಚ್.ಎಸ್.ಆನಂದ್, ಸಹ ಕಾರ್ಯದರ್ಶಿ ಎಂ.ಟಿ.ಸುರೇಶ್, ಖಜಾಂಚಿ ಹೆಚ್.ಎಂ.ಮಂಜು, ನಿರ್ದೇಶಕರಾದ ಬಿ.ಲೋಕೇಶ್, ಹೆಚ್.ಹೆಚ್.ಶ್ರೀನಿವಾಸ್, ರುಕ್ಮಾಂಗದಚಾರ್, ಎಂ.ಸುದೇವನ್ ಮತ್ತು ಮಹಿಳಾ ಮಂಡಳಿ ಅಧ್ಯಕ್ಷೆ ಅನಿಲ ಪದ್ಮನಾಭ ಮತ್ತಿತರರು ಹಾಜರಿದ್ದರು.

## ಎಲೈಟ್ ಶಾಲೆಯಲ್ಲಿ ಸಂಗೀತ ನಿನಾದ 2026 ಸ್ಪರ್ಧೆ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಇಲ್ಲಿನ ಹೇಮಾವತಿ ನಗರದಲ್ಲಿರುವ ಎಲೈಟ್ ಶಾಲೆಯಲ್ಲಿ ಶಾಲಾ ವಿದ್ಯಾರ್ಥಿಗಳಿಗೆ ಸಂಗೀತ ನಿನಾದ-2026 ಸ್ಪರ್ಧೆ ಏರ್ಪಡಿಸಲಾಗಿತ್ತು.

ಗಮಕ ವಿದುಷಿ ಗಣೇಶ ಉಡುಪ ಮಾತನಾಡಿ, ಸಂಗೀತ ಧ್ಯಾನದ ಮೂಲಕ ಮನಸ್ಸನ್ನು ಕೇಂದ್ರೀಕರಿಸಲು ಹಾಗೂ ಸಂತೋಷ ನೀಡಲು ಸಹಕರಿಸುತ್ತದೆ. ವಿದ್ಯಾರ್ಥಿಗಳು ಹಾಡುಗಾರಿಕೆಯನ್ನು ಮೈಗೂಡಿಸಿಕೊಳ್ಳಬೇಕು. ಸಂಗೀತ ಕಾವ್ಯಗಳನ್ನು ಪಠಿಸಲು ಸುಲಲಿತ ಮಾಧ್ಯಮವಾಗಿದೆ ಎಂದರು.

ಗೊರೂರಿನ ಎ.ಎಲ್.ವಿ. ಕಾಲೇಜಿನ ನಿವೃತ್ತ ಪ್ರಾಧ್ಯಾಪಕಿ ಅನುಸೂಯ ತೀರ್ಪುಗಾರರಾಗಿ ಕಾರ್ಯನಿರ್ವಹಿಸಿದರು. ಸುಮಾರು 40 ವಿದ್ಯಾರ್ಥಿಗಳು ವಿವಿಧ ಗೀತೆಗಳನ್ನು ಹಾಡುವುದರ ಮೂಲಕ ಸ್ಪರ್ಧೆಯಲ್ಲಿ ಪಾಲ್ಗೊಂಡರು.

## ಕ್ರೀಡಾಕೂಟ: ಜ್ಞಾನಪ್ರಭಾ ಶಾಲೆಗೆ ಬಹುಮಾನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ನವದೆಹಲಿಯ ಸಿಐಎಸ್‌ಸಿಇ ಬೋರ್ಡ್, ಗೋಣಿಕೊಪ್ಪದ ಕರೀಂಬಯ್ಯಾ ಲರ್ನಿಂಗ್ ಅಂಡ್ ಸ್ಪೋರ್ಟ್ಸ್ ಅಕಾಡೆಮಿ ಹಾಗೂ ಪೋದಾರ್ ಅಂತಾರಾಷ್ಟ್ರೀಯ ಶಾಲೆಯಿಂದ ಹಾಸನದಲ್ಲಿ ಇತ್ತೀಚೆಗೆ ನಡೆದ ವಿವಿಧ ಕ್ರೀಡಾಕೂಟಗಳಲ್ಲಿ ಹಿರೀಸಾವೆ ಜ್ಞಾನಪ್ರಭಾ ಅಂತಾರಾಷ್ಟ್ರೀಯ ಶಾಲೆಯ ವಿದ್ಯಾರ್ಥಿಗಳು ವಿವಿಧ ಸ್ಪರ್ಧೆಗಳಲ್ಲಿ ಗೆಲುವು ಸಾಧಿಸಿದ್ದಾರೆ.



14 ರಿಂದ 17 ವರ್ಷ ವಯೋಮಿತಿಯ ಬಾಲಕರು ಹಾಗೂ ಬಾಲಕಿಯರ ಕ್ರೀಡಾಕೂಟಗಳಲ್ಲಿ ವಿಜೇತರಾಗಿದ್ದು 14 ವರ್ಷ ವಯೋಮಿತಿಯ ಬಾಲಕಿಯರ ಅಥ್ಲೆಟಿಕ್ಸ್ ವಿಭಾಗದಲ್ಲಿ ಆರ್. ಹರ್ಷಿತ 80 ಮೀ. ಹರ್ಡಲ್ಸ್‌ನಲ್ಲಿ ಪ್ರಥಮ, 100 ಮೀ. ಓಟದಲ್ಲಿ ದ್ವಿತೀಯ, ಎತ್ತರ ಜಿಗಿತ ಸ್ಪರ್ಧೆಯಲ್ಲಿ ಚಂದನಪ್ರಿಯ ತೃತೀಯ ಸ್ಥಾನ, 600 ಮೀ. ಓಟದಲ್ಲಿ ದ್ಯುತಿಶ್ರೀ ತೃತೀಯ ಸ್ಥಾನ ಹಾಗು 4★100 ಮೀ. ರಿಲೇ ಓಟದಲ್ಲಿ ಆರ್.ಹರ್ಷಿತ, ದಿಶಾ, ಚಂದನಪ್ರಿಯ ಹಾಗು ದ್ಯುತಿಶ್ರೀ ಅವರನ್ನೊಳಗೊಂಡ ತಂಡ ದ್ವಿತೀಯ ಸ್ಥಾನ ಪಡೆದಿದೆ.

ಖೋ-ಖೋ ಆಟದಲ್ಲಿ ಬಾಲಕಿಯರ ತಂಡ ಪ್ರಥಮ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದೆ. 14 ವರ್ಷದ ಬಾಲಕರ ವಿಭಾಗದಲ್ಲಿ ಉದ್ದ ಜಿಗಿತ ಸ್ಪರ್ಧೆಯಲ್ಲಿ ಪಿ.ಪವನ್ ದ್ವಿತೀಯ, ಜಿ.ಉತ್ತಮ್ 80 ಮೀಟರ್ ಹರ್ಡಲ್ಸ್‌ನಲ್ಲಿ ತೃತೀಯ ಸ್ಥಾನ ಪಡೆದಿದ್ದಾರೆ.

ಬಾಲಕರ ತಂಡ ಖೋ-ಖೋ ಆಟದಲ್ಲಿ ತೃತೀಯ ಸ್ಥಾನ ತನ್ನದಾಗಿಸಿಕೊಂಡಿದೆ. 17 ವರ್ಷ ವಯೋಮಿತಿಯ ಬಾಲಕಿಯರ ವಿಭಾಗದಲ್ಲಿ ಎಂ.ಎನ್.ತೇಜಸ್ವಿನಿ ಎತ್ತರ ಜಿಗಿತ ಸ್ಪರ್ಧೆಯಲ್ಲಿ ತೃತೀಯ, ಅಪೇಕ್ಷಾ ಕರಾಟೆ ಸ್ಪರ್ಧೆಯಲ್ಲಿ ದ್ವಿತೀಯ, 4★100 ಹಾಗೂ 4★400 ಮೀ. ಓಟದ ರಿಲೇ ಸ್ಪರ್ಧೆಯಲ್ಲಿ ಬಾಲಕಿಯರ ತಂಡ ತೃತೀಯ ಸ್ಥಾನ ಪಡೆದಿದೆ.

ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಶಾಲೆಗೆ ಪದಕ ಹಾಗೂ ಪ್ರಶಸ್ತಿ ಗೆದ್ದ ಎಲ್ಲಾ ವಿದ್ಯಾರ್ಥಿಗಳನ್ನು ಹಾಗೂ ತರಬೇತುದಾರ, ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕ ನಿಖಿಲ್ ಅವರನ್ನು ಸಂಸ್ಥೆಯ ಅಧ್ಯಕ್ಷ ಎ.ಜಿ.ಪ್ರಭಾಕರ್, ಕಾರ್ಯದರ್ಶಿ ಎಂ.ಕೆ.ಹರೀಶ್ ಮತ್ತು ಪ್ರಾಂಶುಪಾಲ ಬಿ.ಸಂಜಯ್ ಕ್ರಿಸ್ಟೋಫರ್ ಅಭಿನಂದಿಸಿದರು.

# ಹಾಲು ಉತ್ಪಾದನೆ ಹೆಚ್ಚಳಕ್ಕೆ ಹಾಮೂಲ್ ಯೋಜನೆ

## ಹಸು ಖರೀದಿಗೆ ಸಾಲ ಸೌಲಭ್ಯ | 25 ಸಾವಿರ ಹೈನುಗಾರರಿಗೆ ಲಾಭ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಹೈನುಗಾರಿಕೆಯಲ್ಲಿ ಕ್ರಾಂತಿಕಾರಿ ಬದಲಾವಣೆಗೆ ಮುಂದಾಗಿರುವ ಹಾಸನ ಹಾಲು ಉತ್ಪಾದಕರ ಸಹಕಾರ ಸಂಘವು ಹೊಸದಾಗಿ 25 ಸಾವಿರ ಹೈನುಗಾರರ ಹುಟ್ಟುಹಾಕಿ ಹಾಲು ಉತ್ಪಾದನೆ ಗುರಿಯನ್ನು 20 ಲಕ್ಷ ಲೀಟರ್‌ಗೆ ಹೆಚ್ಚಿಸುವ ಯೋಜನೆ ಹಾಕಿಕೊಂಡಿದೆ.

ಪ್ರಸ್ತುತ ಪ್ರತಿದಿನ 16.50 ಲ.ಲೀಟರ್ ಹಾಲು ಸಂಗ್ರಹವಾಗುತ್ತಿದೆ. ಅದನ್ನು ಮುಂದಿನ ಒಂದು ವರ್ಷದಲ್ಲಿ 20 ಲ. ಲೀ.ಗೆ ಹೆಚ್ಚಿಸುವ ಗುರಿ ಹಾಕಿಕೊಳ್ಳಲಾಗಿದೆ. ಅದಕ್ಕಾಗಿ ಹಸು ಖರೀದಿ ಸಾಲ ಯೋಜನೆಯನ್ನು ಪರಿಚಯಿಸಲಾಗಿದೆ. ಕೃಷಿ ಜೊತೆಗೆ ಹೈನುಗಾರಿಕೆಯನ್ನು ಉಪಕಸುಬಾಗಿ ಮಾಡಿಕೊಂಡಿರುವ ರೈತರು ಆರ್ಥಿಕವಾಗಿ ಸದೃಢರಾಗಲು ಯೋಜನೆ ಸಹಕಾರಿ ಎಂದು ವಿಶ್ಲೇಷಿಸಲಾಗಿದೆ.

### ಏನಿದು ಹಸು ಖರೀದಿ ಯೋಜನೆ

ಹಾಸನ ಹಾಲು ಉತ್ಪಾದಕರ ಸಹಕಾರ ಸಂಘದ ವ್ಯಾಪ್ತಿಯಡಿ ಚಿಕ್ಕಮಗಳೂರು, ಮಡಿಕೇರಿ ಹಾಗೂ ಹಾಸನ ಜಿಲ್ಲೆಯ ಡೇರಿಗಳು ಒಳಪಡುತ್ತವೆ. ಹಾಲಿನ ಉತ್ಪಾದನೆಯನ್ನು ಹೆಚ್ಚಿಸುವ ಉದ್ದೇಶದಿಂದ ಆರಂಭಿಕವಾಗಿ ಹಾಸನ ಜಿಲ್ಲೆಯ ರೈತರಿಗೆ ಹಸು ಖರೀದಿ ಸಾಲ ಯೋಜನೆ ಅನುಷ್ಠಾನಗೊಳಿಸಲಾಗಿದೆ. ಅಂದಾಜು 1 ಲಕ್ಷ ಹೈನುಗಾರರು ಜಿಲ್ಲೆಯಲ್ಲಿದ್ದು



ಆ ಪೈಕಿ 25 ಸಾವಿರ ರೈತರಿಗೆ ಸಾಲ ಮಂಜೂರು ಮಾಡಲು ನಿರ್ಧರಿಸಲಾಗಿದೆ. ಸಾಂಕೇತಿಕವಾಗಿ 927 ಹೈನುಗಾರರಿಗೆ ಮಂಜೂರಾತಿ ಪತ್ರ ವಿತರಿಸಲಾಗಿದೆ. ಹೆಚ್‌ಡಿಸಿಸಿ ಬ್ಯಾಂಕ್ ನೆರವಿನೊಂದಿಗೆ ಸಾಲ ಸೌಲಭ್ಯ ನೀಡಲಾಗುತ್ತಿದೆ.

ಹಸು ಖರೀದಿಸಲು ಬಯಸುವ ಹೈನುಗಾರರಿಗೆ 2 ರಿಂದ 3 ಲಕ್ಷ ರೂ. ಸಾಲ ನೀಡಲಾಗುತ್ತದೆ. ಯೋಜನೆಯಡಿ ಖರೀದಿಸಿದ ಹಸುವಿಗೆ ಶೇ. 40ರಷ್ಟು ಡೇರಿ ಹಾಗು ಶೇ. 40 ರಷ್ಟು ವಿಮೆಯನ್ನು ಬ್ಯಾಂಕ್ ಪಾವತಿಸುತ್ತದೆ. ಉಳಿದ ಶೇ. 20ರ ಕಂತನ್ನು ರೈತರೇ ಪಾವತಿಸಬೇಕು. ಅನಾರೋಗ್ಯ ಮತ್ತಿತರ ಕಾರಣಗಳಿಂದ ಹಸು ಮೃತಪಟ್ಟರೆ 75 ಸಾವಿರ ರೂ. ಪರಿಹಾರ ನೀಡಲಾಗುತ್ತದೆ. ಒಬ್ಬ ರೈತ 3 ಹಸು ಖರೀದಿಸುವ ಅವಕಾಶಗಳಿವೆ.

### ಫಲಾನುಭವಿಗೆ ಇರಬೇಕಾದ ಅರ್ಹತೆ

ಹಸು ಖರೀದಿ ಸಾಲ ಯೋಜನೆಯ ಫಲಾನುಭವಿ ಆಗಬೇಕೆಂದರೆ ಡೇರಿಗೆ ಹಾಲು ಹಾಕುತ್ತಿರಬೇಕು. ಅಥವಾ ಹೊಸದಾಗಿ ಹೈನುಗಾರಿಕೆ ಪ್ರಾರಂಭಿಸುವವರಿದ್ದರೆ ಗ್ರಾಮದ ವಾಸಸ್ಥಳ ದೃಢೀಕರಣ ಹೊಂದಿರಬೇಕು. ಜಮೀನು ಇಲ್ಲದೆ ಇರುವವರಿಗೆ 1 ಲಕ್ಷ ರೂ. ವರೆಗೆ ಸಾಲ ನೀಡಲಾಗುತ್ತದೆ. ಈ ಸಾಲ ಪಡೆದವರು ತಿಂಗಳಿಗೆ 3600 ರೂ. ಕಂತು ಪಾವತಿಸಬೇಕಾಗುತ್ತದೆ. ಶೇ. 10.50 ರಷ್ಟು ಬಡ್ಡಿ ವಿಧಿಸಲಾಗುತ್ತದೆ. ಸಾಲಗಾರರಿಗೆ ಮತ್ತೊಬ್ಬ ಹಾಲು ಉತ್ಪಾದಕರೇ ಶೂರಿಟಿ ಆಗಿರುತ್ತಾರೆ. ಇನ್ನು 3 ಲಕ್ಷ ರೂ. ಸಾಲ ಪಡೆಯಲು ಇಚ್ಛಿಸುವವರು ತಮ್ಮ 20 ಗುಂಟೆ ಜಮೀನನ್ನು ಶೂರಿಟಿಯಾಗಿ ನೀಡಬೇಕು. ಇವರಿಗೆ 3.50 ರೂ. ಬಡ್ಡಿ ನಿಗದಿಪಡಿಸಿದ್ದು ಪ್ರತಿ ಆರು ತಿಂಗಳಿಗೆ ಒಮ್ಮೆಯಂತೆ ಕಂತು ಪಾವತಿಸಹಬುದು ಅಥವಾ ತಿಂಗಳಿಗೆ ಕಟ್ಟುವ ವ್ಯವಸ್ಥೆಯನ್ನಾದರೂ ಮಾಡಿಕೊಳ್ಳಬಹುದು.

### ಹಸು ಖರೀದಿಗೆ ಸಮಿತಿ ರಚನೆ

ಹೆಚ್‌ಡಿಸಿಸಿ ಬ್ಯಾಂಕ್ ಮೂಲಕ ಸಾಲ ನೀಡಲಾಗುತ್ತದೆಯಾದರೂ ಹಣವನ್ನು ಹೈನುಗಾರರಿಗೆ ನೇರವಾಗಿ ನೀಡುವುದಿಲ್ಲ. ಅದಕ್ಕಾಗಿಯೇ ಸಮಿತಿ ರಚಿಸಲಾಗಿದೆ. ಹಾಲಿನ ಡೇರಿ ಕಾರ್ಯದರ್ಶಿ, ಪಶು ವೈದ್ಯಾಧಿಕಾರಿ, ಗ್ರಾಮದ ಮುಖಂಡರು, ಬ್ಯಾಂಕ್ ಅಧಿಕಾರಿಯನ್ನು ಒಳಗೊಂಡ ಸಮಿತಿಯು ಪರಿಶೀಲಿಸಿ ಫಲಾನುಭವಿಗಳ ಆಯ್ಕೆ ಮಾಡುತ್ತದೆ. ಹಾಸನ ಅಥವಾ ಹೊರ ಜಿಲ್ಲೆಗಳಲ್ಲಿ ಹಸುಗಳನ್ನು ಖರೀದಿಸಿ ಅವುಗಳನ್ನು ರೈತರಿಗೆ ಹಸ್ತಾಂತರಿಸಲಾಗುತ್ತದೆ. ಜಿಲ್ಲೆ ಹೈನುಗಾರಿಕೆಯಲ್ಲಿ ದ್ವಿತೀಯ ಸ್ಥಾನದಲ್ಲಿದ್ದು ಮೊದಲ ಸ್ಥಾನಕ್ಕೇರಲು ಹಾಮೂಲ್ ಅವಿರತ ಶ್ರಮ ಹಾಕುತ್ತಿದೆ.

ಪ್ರಸ್ತುತ ಆಲೂರು ತಾಲ್ಲೂಕಿನಲ್ಲಿ 30,321, ಅರಕಲಗೂಡು 80,102, ಅರಸೀಕೆರೆ 94,318, ಬೇಲೂರು 58,464, ಚನ್ನರಾಯಪಟ್ಟಣ 110,603, ಹಾಸನ 96,034, ಹೊಳೆನರಸೀಪುರ 67,262 ಹಾಗೂ ಸಕಲೇಶಪುರದಲ್ಲಿ 23,933 ರಾಸುಗಳಿವೆ.

# ಅರಕಲಗೂಡು ಆಸ್ಪತ್ರೆಯಲ್ಲಿ ವೈದ್ಯರ ಕೊರತೆ ವಿಪರೀತ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಮಕ್ಕಳ ತಜ್ಞರು, ಪ್ರಸೂತಿ ಮತ್ತು ಸ್ತ್ರೀ ರೋಗ ತಜ್ಞರು, ರೇಡಿಯಾಲಜಿಸ್ಟ್ ಹಾಗೂ ಅರವಳಿಕೆ ತಜ್ಞ ವೈದ್ಯರ ಕೊರತೆಯಿಂದ ಸಕಾಲಿಕವಾಗಿ ಜನ ಸಾಮಾನ್ಯರಿಗೆ ಆರೋಗ್ಯ ಸೇವೆ ಕಲ್ಪಿಸಲು ಸಾಧ್ಯವಾಗುತ್ತಿಲ್ಲ. ಕೂಡಲೇ ಅಗತ್ಯ ವೈದ್ಯರ ಕೊರೆತೆಯನ್ನು ನೀಗಿಸುವಂತೆ ಆಸ್ಪತ್ರೆಯ ಆಡಳಿತಾ ವೈದ್ಯಾಧಿಕಾರಿ ಡಾ.ಸ್ವಾಮೀಗೌಡ ಇಲಾಖೆಯ ಮೇಲಾಧಿಕಾರಿಗಳಿಗೆ ಮನವಿ ಮಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆಸ್ಪತ್ರೆಯು 100 ಹಾಸಿಗೆಗಳು, 13 ಐಸಿಯು ವಾರ್ಡ್ ಹೊಂದಿದೆ. ಪ್ರತಿದಿನ 500 ರಿಂದ 600 ಮಂದಿ ಆಸ್ಪತ್ರೆಗೆ ಚಿಕಿತ್ಸೆಗೆಂದು ಬರುತ್ತಾರೆ. ಒಟ್ಟು 12 ವೈದ್ಯರ ಮಂಜೂರಾತಿ ಇದ್ದು, ಹಾಲಿ 7 ಮಂದಿ ಮಾತ್ರ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಈ ಪೈಕಿ ಡಾ. ನಿಶಿತಾ ಕೆ. ಅವರು ಮಾ. 23ರಂದು ಕರ್ತವ್ಯಕ್ಕೆ ವರದಿಯಾಗಿದ್ದು, ಇಲ್ಲಿಯವರೆಗೂ ಕರ್ತವ್ಯಕ್ಕೆ ಅನಧಿಕೃತ ಗೈರಾಗಿದ್ದಾರೆ. ಕೀಲು, ಮೂಳೆ ತಜ್ಞರಾದ ಡಾ.ಹರೀಶ್ ಅವರು ಕೂಡ ದಿನಾಂಕ ಫೆ. 27ರಂದು ಸ್ವಯಂ ನಿವೃತ್ತಿಗಾಗಿ ಅರ್ಜಿ ನೀಡಿದ್ದಾರೆ. ಡಾ.ಸ್ಮಿತಾ ಎ. ಅವರು ಹೆರಿಗೆ ರಜೆಯಲ್ಲಿ ಇದ್ದಾರೆ. ಯಾರೊಬ್ಬರು ಅರವಳಿಕೆ ತಜ್ಞರು ಇಲ್ಲ. ಕರ್ತವ್ಯ ನಿರ್ವಹಿಸುತ್ತಿದ್ದ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞ ಡಾ. ಜಾಫರ್ ರಮೀಜ್ ಸಿದ್ಧಕಿ ಅವರು ಕೂಡ ಸ್ವಯಂ ನಿವೃತ್ತಿ ಕೋರಿ ಅರ್ಜಿ ನೀಡಿರುತ್ತಾರೆ. ಇದು ಸರ್ಕಾರದ ಮಟ್ಟದಲ್ಲಿ ಇತ್ಯರ್ಥಗೊಳ್ಳಬೇಕಿದೆ. ಇದರಿಂದ ಆಸ್ಪತ್ರೆಯಲ್ಲಿ ಹೆರಿಗೆ ಪ್ರಮಾಣ ಕಡಿಮೆಯಾಗುತ್ತಿದೆ. ಯಾರ್ಯಾರು ವೈದ್ಯರು ಸ್ವಯಂ ನಿವೃತ್ತಿಗೆ ಅರ್ಜಿ ಸಲ್ಲಿಸಿದ್ದಾರೆ. ಅವರನ್ನು ಕೂಡಲೇ ಸರ್ಕಾರದ ಹಂತದಲ್ಲಿ ಇತ್ಯರ್ಥ ಮಾಡಿ ಖಾಲಿ ಹುದ್ದೆ ಎಂದು ತೋರಿಸಿ ಹೊಸದಾಗಿ ನೇಮಕ ಮಾಡಿಕೊಡಬೇಕೆಂದು ಎಂದು ತಿಳಿಸಿದರು.



ಆಸ್ಪತ್ರೆಯಲ್ಲಿ ಎರಡು ಸ್ಕ್ಯಾನಿಂಗ್ ಯಂತ್ರಗಳು ಇದ್ದು, ರೇಡಿಯಾಲಜಿಸ್ಟ್ ಇರುವುದಿಲ್ಲ. ಪ್ರತಿ ಗುರುವಾರದಂದು ಹೊಳೆನರಸೀಪುರ ಆಸ್ಪತ್ರೆಯಿಂದ ರೇಡಿಯಾಲಜಿಸ್ಟ್ ಬಂದು ತಪಾಸಣೆ ನಡೆಸುತ್ತಾರೆ. ಇವರಿಗೆ ಕರ್ತವ್ಯ ಒತ್ತಡ ಇದ್ದರೇ ಅವರು ನಿಗದಿಯಂತೆ ಗುರುವಾರ ಬರದೆ ಗೈರಾಗುತ್ತಾರೆ. ಆಸ್ಪತ್ರೆಗೆ ಒಟ್ಟು 35 ಗ್ರೂಪ್ ಡಿ ಹುದ್ದೆಗಳಿದ್ದು, ಕೇವಲ ಒಬ್ಬರು ಕಾರ್ಯನಿರ್ವಹಿಸುತ್ತಿದ್ದಾರೆ. 34 ಖಾಲಿ ಉಳಿದಿವೆ. ಇದರಿಂದ ನಿತ್ಯದ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಬಾಕಿ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದಲ್ಲಿ ತುಂಬಿಕೊಳ್ಳಲು ಅವಕಾಶ ಮಾಡಿಕೊಡಬೇಕಿದೆ. ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ 3 ಹುದ್ದೆಗಳು ಖಾಲಿ ಇವೆ. ಶುಶ್ರೂಷಾಧಿಕಾರಿಗಳು ಹುದ್ದೆ ಒಟ್ಟು 20 ಇದ್ದು, 16 ಮಂದಿ ಕಾರ್ಯನಿರ್ವಹಿಸುತ್ತಿದ್ದಾರೆ. 4 ಹುದ್ದೆ ಖಾಲಿ ಇವೆ. ಹಿರಿಯ ಔಷಧಿ ವಿತರಕರು, ಕಿರಿಯ ಔಷಧಿ ವಿತಕರ ಹುದ್ದೆ, ಕಿರಿಯ ಪ್ರಯೋಗಶಾಲಾ ಟೆಕ್ನಾಲಾಜಿಸ್ಟ್, ಪುರುಷ ಆರೋಗ್ಯ ಸಹಾಯಕರು 2 ಮತ್ತು ಕಿರಿಯ ಮಹಿಳಾ ಆರೋಗ್ಯ ಸಹಾಯಕರು 4 ಹುದ್ದೆಗಳು ಖಾಲಿ ಉಳಿದಿವೆ. ಇದು ನಮಗೆ ಆರೋಗ್ಯ ಸೇವೆಗೆ ಸಮಸ್ಯೆಯಾಗುತ್ತಿದೆ. ತಜ್ಞ ವೈದ್ಯರು ಸೇರಿದಂತೆ ಇತರೆ ಹುದ್ದೆಗಳು ಸೇರಿ ಒಟ್ಟು 95 ಹುದ್ದೆಗಳಿಗೆ ಕೇವಲ 39 ಮಂದಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. 56ಹುದ್ದೆಗಳು ಖಾಲಿ ಇವೆ ಎಂದರು.

# ರಾಷ್ಟ್ರ ಧ್ವಜದ ಕುರಿತು ಅರಿವು ಕಾರ್ಯಕ್ರಮ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಆಲೂರು: ಜಿಲ್ಲಾ ಪಂಚಾಯಿತಿ, ಭಾರತ ಸೇವಾದಳ ತಾಲೂಕು ಸಮಿತಿ ವತಿಯಿಂದ ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ರಾಷ್ಟ್ರ ಧ್ವಜ ಹಾರಿಸುವ ಕ್ರಮದ ಕುರಿತು ಅರಿವು ಮೂಡಿಸಲಾಯಿತು.

ಭಾರತ ಸೇವಾದಳ ವಲಯ ಸಂಘಟಕಿ ವಿ.ಎಸ್.ರಾಣಿ ಅವರು, ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯ ಮಾಹಿತಿ ಮತ್ತು ರಾಷ್ಟ್ರಗೀತೆಯ ಕಾರ್ಯಾಗಾರದಲ್ಲಿ ರಾಷ್ಟ್ರಧ್ವಜ ನೀತಿ ಸಂಹಿತೆಯ ಪ್ರಕಾರ ರಾಷ್ಟ್ರ ಧ್ವಜ ವಂದನೆ ಮತ್ತು ಧ್ವಜ ಅವರೋಹಣ ಕ್ರಮದ ಸಂಪೂರ್ಣ ಮಾಹಿತಿ ನೀಡಿದರು.

ರಾಷ್ಟ್ರ ಧ್ವಜ ಹಾರಿಸುವ ಕ್ರಮದ ಬಗ್ಗೆ ಮತ್ತು ಹಳೆಯ ರಾಷ್ಟ್ರ ಧ್ವಜಗಳ ಸಂಸ್ಕಾರಗಳ ಬಗ್ಗೆ ತಿಳಿಸಿಕೊಡಲಾಯಿತು.

ಅಧ್ಯಕ್ಷತೆ ವಹಿಸಿದ್ದ ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಸುಬ್ರಹ್ಮಣ್ಯ ಶರ್ಮಾ ಮಾತನಾಡಿ, ಈ ಕಾರ್ಯಗಾರವು ಅತ್ಯಮೂಲ್ಯವಾದುದು. ರಾಷ್ಟ್ರಧ್ವಜ ರಾಷ್ಟ್ರಗೀತೆಯ ಮಾಹಿತಿಯನ್ನು ಸಂಪೂರ್ಣವಾಗಿ ತಿಳಿದುಕೊಂಡಿರಬೇಕು. ಭಾರತ ಸೇವಾದಳದವರು ಅತ್ಯುತ್ತಮ ಕಾರ್ಯಕ್ರಮ ನಡೆಸುತ್ತಿದ್ದಾರೆ. ಪ್ರತಿವರ್ಷ ಸಹ ನಮಗೆ ಮಾಹಿತಿ ನೀಡುತ್ತಿದ್ದಾರೆ ಎಂದರು.

ಭಾರತ ಸೇವಾದಳದ ತಾಲೂಕು ಅಧ್ಯಕ್ಷ ಬಾಲಕೃಷ್ಣ ಮತ್ತಿತರರಿದ್ದರು.

# ಸ್ವಾವಲಂಬಿ ಬದುಕಿಗೆ ಆರ್ಥಿಕ ಸದೃಢತೆ ಮುಖ್ಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹೊಳೆನರಸೀಪುರ: ಮಹಿಳೆಯರು ಆರ್ಥಿಕವಾಗಿ ಸಬಲರಾದರೆ ಕುಟುಂಬ ಮತ್ತು ಸಮಾಜ ಸದೃಢವಾಗುತ್ತದೆಂದು ತಾಲ್ಲೂಕು ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಮುನಿರಾಜು ಹೇಳಿದರು.

ತಾಲ್ಲೂಕಿನ ಬಾಗಿವಾಳು ಗ್ರಾಮದಲ್ಲಿ ಏರ್ಪಡಿಸಿದ್ದ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (ಎನ್‌ಆರ್‌ಎಲ್‌ಎಂ) ಮತ್ತು ನಿಸರ್ಗ ಸಂಜೀವಿನಿ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟ ವತಿಯಿಂದ ನಿರ್ಮಿಸಿರುವ ಸಕ್ಷಮ್ ಕೇಂದ್ರ (ಆರ್ಥಿಕ ಸಾಕ್ಷರತಾ ಹಾಗು ಸೇವಾ ವಿತರಣಾ ಕೇಂದ್ರ) ಉದ್ಘಾಟಿಸಿ ಅವರು ಮಾತನಾಡಿದರು.

ಸಂಘಟಿತ ಮಹಿಳೆಯರ ಸ್ವಸಹಾಯ ಸಂಘ ಗುಂಪುಗಳಿಗೆ ಸಾಲ ಸೌಲಭ್ಯ ಸಂಬಂಧಿತ ಮಾಹಿತಿ ನೆರವು ನೀಡಲು ಸಕ್ಷಮ್ ಕೇಂದ್ರ ಪ್ರಾರಂಭಿಸಲಾಗಿದೆ. ಸ್ವಸಾಯ ಸಂಘದ ಗುಂಪುಗಳು ಈ ಕೇಂದ್ರದ ಮೂಲಕ ಆರ್ಥಿಕ



ನೆರವಿನ ಸೌಲಭ್ಯಗಳ ಮಾಹಿತಿ ಪಡೆದು ಸದೃಢರಾಗಬೇಕೆಂದು ಹೇಳಿದರು.

ಖಾಸಗಿ ಫೈನಾನ್ಸ್ ಹಾಗೂ ಸಾಮಾಜಿಕ ಜಾಲತಾಣದಲ್ಲಿ ಡಿಜಿಟಲ್ ವಂಚನೆಯ ಜಾಲದ ಮೋಸಕ್ಕೆ ಮಹಿಳೆಯರು ಮತ್ತು ಸಂಘ ಸಂಸ್ಥೆಗಳು ಬಲಿಯಾಗಬಾರದು. ಈ ನಿಟ್ಟಿನಲ್ಲಿ ಆರ್ಥಿಕ ಸಾಕ್ಷರತೆ ಮತ್ತು ಸಂಬಂಧಿತ ಸೇವಾ ಮಾಹಿತಿಗಾಗಿ ಈ ಸಕ್ಷಮ್ ಕೇಂದ್ರ ಕಾರ್ಯನಿರ್ವಹಿಸಲಿದೆ.

ಸ್ವಸಹಾಯದ ಗುಂಪುಗಳು ಅದರ ಸದ್ಬಳಕೆ ಮಾಡಿಕೊಳ್ಳಿ ಎಂದರು.

ತಾಲ್ಲೂಕು ಕಾರ್ಯಕ್ರಮ ವ್ಯವಸ್ಥಾಪಕ ನವೀನ್ ಮಾತನಾಡಿ, ಪ್ರತಿಯೊಬ್ಬರೂ ಆರ್ಥಿಕ ಸಾಕ್ಷರತೆ ಹೊಂದುವುದು ಇಂದಿನ ದಿನಗಳಲ್ಲಿ ಅತ್ಯಗತ್ಯವಾಗಿದೆ. ತಾವು ಗಳಿಸಿದ ಸಂಪಾದನೆಯಲ್ಲಿ ಉಳಿತಾಯ ಮಾಡುವ ವಿಧಾನ ಹಾಗೂ ಸರ್ಕಾರದ ಅನುದಾನ, ವಿಶೇಷ ಸಾಲ ಸೌಲಭ್ಯಗಳನ್ನು ಪಡೆಯುವ ಹಾಗು ಬಳಸಿಕೊಳ್ಳುವ ಸಾಮಾನ್ಯ ಜ್ಞಾನ ಇದ್ದಲ್ಲಿ ಸ್ವಾವಲಂಬಿಗಳಾಗಿ ಆರ್ಥಿಕವಾಗಿ ಪ್ರಗತಿ ಹೊಂದಬಹುದು. ಈ ನಿಟ್ಟಿನಲ್ಲಿ ಅದರಲ್ಲೂ ಗ್ರಾಮೀಣ ಪ್ರದೇಶದ ಮಹಿಳೆಯರು

ಮತ್ತು ಸ್ವಸಹಾಯ ಸಂಘಗಳ ಗುಂಪಿಗೆ ಆರ್ಥಿಕ ಸಾಕ್ಷರತೆ ಮತ್ತು ಸಾಲ ಸೌಲಭ್ಯಗಳ ವಿತರಣಾ ಮಾಹಿತಿ ತಲುಪಿಸುವ ಸಲುವಾಗಿ ಈ ಕೇಂದ್ರ ಆರಂಭಿಸಲಾಗಿದೆ ಎಂದರು.

ಬಾಗಿವಾಳು ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ರುದ್ರಮೂರ್ತಿ ಮಾತನಾಡಿದರು.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕೆ.ಸಿ.ವಿಜಯ್, ಎನ್‌ಆರ್‌ಎಲ್‌ಎಂ ವಲಯ ಮೇಲ್ವಿಚಾರಕಿ ನಿಸರ್ಗ, ಸ್ಥಳೀಯ ಸಂಪನ್ಮೂಲ ವ್ಯಕ್ತಿ ಚೈತ್ರ, ಮಂಜುಳಾ, ಕೃಷಿ ಸಖಿ ಸೌಮ್ಯ,

ಪಶುಸಖಿ ಸವಿತಾ ಬ್ಯಾಂಕಿನ ವ್ಯವಹಾರ ಪ್ರತಿನಿಧಿ ಭೂಮಿಕಾ, ಗ್ರಾಮ ಪಂಚಾಯಿತಿಯ ಮಾಜಿ ಸದಸ್ಯ ಕಡವಿನ ಕೋಟೆ ರಾಜೇಗೌಡ, ಮುರಳಿ, ಗ್ರಾಮಸ್ಥರಾದ ರುದ್ರಪ್ಪ ಹಾಜರಿದ್ದರು.

# ಶಿಕ್ಷಣ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಪ್ರಕಾಶ್‌ಗೆ ಬೀಳ್ಕೊಡುಗೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಶಾಲಾ ಶಿಕ್ಷಣ ಇಲಾಖೆಯಲ್ಲಿ ಹಲವು ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾದ ಜಂಟಿ ನಿರ್ದೇಶಕ ಕೆ.ಎನ್.ಪ್ರಕಾಶ್ ಅವರಿಗೆ ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಅಧಿಕಾರಿಗಳು, ಶಿಕ್ಷಕರು ಹಾಗು ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಆತ್ಮೀಯ ಬೀಳ್ಕೊಡುಗೆ ನೀಡಿದರು.

ಕೆ.ಎನ್.ಪ್ರಕಾಶ್ ಅವರು ತಮ್ಮ ಸೇವಾವಧಿಯಲ್ಲಿ ಶಿಕ್ಷಣ ಇಲಾಖೆಯಲ್ಲಿ ಪಾರದರ್ಶಕ ಆಡಳಿತ, ಸಿಬ್ಬಂದಿಯೊಂದಿಗೆ ಆತ್ಮೀಯ ಬಾಂಧವ್ಯ ಹಾಗು ವಿದ್ಯಾರ್ಥಿ ಹಿತಾಸಕ್ತಿಗೆ ಆದ್ಯತೆ ನೀಡುವ ಮೂಲಕ ಉತ್ತಮ ಅಧಿಕಾರಿಯಾಗಿ ಗುರುತಿಸಿಕೊಂಡಿದ್ದಾರೆ. ಅವರ ಕಾರ್ಯವೈಖರಿ ಇಲಾಖೆಯ ಸಿಬ್ಬಂದಿಗೆ ಮಾದರಿಯಾಗಿದೆ ಎಂದು ಸಹೋದ್ಯೋಗಿಗಳು ಅಭಿಪ್ರಾಯಪಟ್ಟರು.




ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ, ಜಿಲ್ಲಾ ಘಟಕದ ಅಧ್ಯಕ್ಷ ಜೆ.ಆರ್.ಕೆಂಚೇಗೌಡ, ರಾಷ್ಟ್ರೀಯ ಮಂಡಳಿ ಸದಸ್ಯ, ರವಿ ನಾಕಲಗೂಡು, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಕೃಷ್ಣಮೂರ್ತಿ, ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಬಸವರಾಜ್, ಕನ್ನಡ ಸಾಹಿತ್ಯ ಪರಿಷತ್‌ನ ಮಾಜಿ ಅಧ್ಯಕ್ಷ ನಾಯಕರಹಳ್ಳಿ ಮಂಜೇಗೌಡ ಮತ್ತಿತರರಿದ್ದರು.

# ಇತಿಹಾಸದಲ್ಲಿ ಈ ದಿನ

## ಆಗಸ್ಟ್-09

1942: ಮಹಾತ್ಮ ಗಾಂಧೀಜಿ ನೇತೃತ್ವದಲ್ಲಿ 1942ರ ಆಗಸ್ಟ್ 8ರಂದು ಮುಂಬೈನಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸಭೆಯಲ್ಲಿ ಭಾರತ ಬಿಟ್ಟು ತೊಲಗಿ ಚಳವಳಿಗೆ ಕರೆ ನೀಡಲಾಯಿತು.

1945: ದ್ವಿತೀಯ ಮಹಾಯುದ್ಧದ ಸಂದರ್ಭದಲ್ಲಿ ಅಮೆರಿಕವು ಜಪಾನ್‌ನ ನಾಗಾಸಾಕಿ ನಗರದ ಮೇಲೆ ಪರಮಾಣು ಬಾಂಬ್ ದಾಳಿ ನಡೆಸಿತು. ಅಪಾರ ಪ್ರಮಾಣದ ಜೀವಹಾನಿ ಸಂಭವಿಸಿತು. ಇದಾದ ಕೆಲವೇ ದಿನಗಳಲ್ಲಿ ಜಪಾನ್ ಶರಣಾಗತಿಗೆ ಮುಂದಾಯಿತು.

1974: ವಾಟರ್‌ಗೇಟ್ ಹಗರಣದ ಹಿನ್ನೆಲೆಯಲ್ಲಿ ಅಮೆರಿಕದ ಅಧ್ಯಕ್ಷ ರಿಚರ್ಡ್ ನಿಕ್ಸನ್ ಅವರು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ ಅಮೆರಿಕದ ಮೊದಲ ಅಧ್ಯಕ್ಷ ಎಂಬ ದಾಖಲೆಯೂ ಅವರದ್ದಾಗಿದೆ.

### ಜನನ

1945: ವಿಷ್ಣುವರ್ಧನ್, ಕನ್ನಡದ ಖ್ಯಾತ ನಟ

1963: ವಿಟ್ನಿ ಹ್ಯೂಸ್ಟನ್, ಅಮೆರಿಕದ ಖ್ಯಾತ ಗಾಯಕಿ ಮತ್ತು ನಟಿ

1927: ಮಾರ್ವಿನ್ ಮಿಂಸ್ಕಿ, ಕೃತಕ ಬುದ್ಧಿಮತ್ತೆ ಕ್ಷೇತ್ರದ ಪ್ರಮುಖ ವಿಜ್ಞಾನಿ

### ಮರಣ

1975: ಡಿಮಿಟ್ರಿ ಶೋಸ್ತಕೋವಿಚ್, ರಷ್ಯಾದ ಖ್ಯಾತ ಸಂಗೀತ ಸಂಯೋಜಕ

1995: ಜೆರ್ರಿ ಗಾರ್ಸಿಯಾ, ಅಮೆರಿಕದ ಪ್ರಸಿದ್ಧ ಸಂಗೀತಗಾರ

# ಅದೊಂದು ಬೇರೆಯದೇ ಅನುಭೂತಿ...1

**ಧನಂಜಯ ಜೀವಾಳ ಬಿ.ಕೆ.**

ಗ್ರಾಮಾಯಣ-43

ಕುದೋಳಿಗೆ ಅಂದು ರಾತ್ರಿಯೇ ವಾಪಾಸಾದ ಮೇಷ್ಟ್ರು ಮುಂದಿನ ತಿಂಗಳು ತಮ್ಮ ಶಾಲೆಯಿಂದ ವಿದ್ಯಾರ್ಥಿಗಳನ್ನು ಶೈಕ್ಷಣಿಕ ಪ್ರವಾಸ ಕೊಂಡೊಯ್ಯುವ ಕುರಿತು ಮುಖ್ಯೋಪಾಧ್ಯಾಯರ ಬಳಿ ಚರ್ಚೆ ಆರಂಭಿಸಿದರು. ಅಕ್ಟೋಬರ್ ತಿಂಗಳ ಕೊನೆಯ ವಾರದಲ್ಲಿ ಹೋಗುವುದೆಂದೂ, ಸ್ಥಳಗಳ ಆಯ್ಕೆಯನ್ನು ಗಿರೀಶ್ಮೇಷ್ಟ್ರೇ ಅಂತಿಮಗೊಳಿಸಲು ಸ್ವಾತಂತ್ರ್ಯವನ್ನೂ ನೀಡಿದರು. ಈ ಊರಿನಲ್ಲಿ ತಾನಿದ್ದರೆ ಹೆಚ್ಚೆಂದರೆ ಇನ್ನೊಂದು ವರ್ಷ, ಹಾಗಾಗಿ ತನ್ನ ಶಾಲೆಯ ಮಕ್ಕಳಿಗೆ ತನ್ನೂರಿನ ಕೆಲ ಅಪೂರ್ವ ಸ್ಥಳಗಳನ್ನು ಈ ಪ್ರವಾಸದ ಮೂಲಕವಾದರೂ ತೋರಿಸಬೇಕೆಂದು ಅಪೇಕ್ಷಿಸಿ, ತಮ್ಮ ಸಹೋದ್ಯೋಗಿಗಳಲ್ಲೂ ಮಾತನಾಡಿದರು. ಮಲೆನಾಡಿನ ಬಗೆಗೆ ಎಲ್ಲಿಲ್ಲದ ಕುತೂಹಲ ಹಾಗೂ ಪ್ರೀತಿ ಹೊಂದಿದ್ದ ಅವರೆಲ್ಲರೂ ಒಕ್ಕೊರಲಿನಿಂದ ಗಿರೀಶ್ಮೇಷ್ಟ್ರಿಗೇ ಜೈ ಅಂದೇಬಿಟ್ಟರು.

ಬೆಳಿಗ್ಗೆ ಐದಕ್ಕೆ ಕುದೋಳನ್ನು ಬಿಟ್ಟು ಹೊರಡುವುದು, ಎಂಟಕ್ಕೆ ಭೈರಾಪುರದ ನಾಣ್ಯದ ಭೈರವೇಶ್ವರ ದೇವಾಲಯದ ಆವರಣದಲ್ಲಿ ಬೆಳಗಿನ ತಿಂಡಿಯನ್ನು ಮುಗಿಸಿಕೊಂಡು ಶಿಶಿಲ ಕುಡಿಯನ್ನು ಏರಲು ಪ್ರಾರಂಭಿಸುವುದು, ಮಧ್ಯಾಹ್ನ ಎರಡು ಗಂಟೆಗೆ ಬೆಟ್ಟವಿಳಿದು ಮತ್ತದೇ ದೇವಾಲಯದ ಬಳಿ ಮಧ್ಯಾಹ್ನದ ಊಟ ಮಾಡಿಕೊಂಡು, ದೇವರಮನೆಯತ್ತ ಪ್ರಯಾಣ ಬೆಳೆಸುವುದು. ದೇವರಮನೆಯ ಕಾಲಭೈರವೇಶ್ವರ ದೇವಾಲಯದ ಆವರಣದಲ್ಲಿ ಟೆಂಟು ಹಾಕಿಕೊಂಡು ರಾತ್ರಿ ಕಳೆದು, ಮಾರನೇಯ ದಿನ ಆರುಗಂಟೆಗೆ ಅಲ್ಲಿಂದ ಹೊರಟು, ಬಲ್ಲಾಲರಾಯನ ದುರ್ಗ ಪರಿಸರಕ್ಕೆ ಚಾರಣ ಹೋಗುವುದು. ಆ ಸಂಜೆಯೆ ಅಲ್ಲಿಂದ ಹೊರಟು ಮುತ್ತೋಡಿ ಅಭಯಾರಣ್ಯದ ಡಾರ್ಮೆಟರಿಯಲ್ಲಿ



ತಂಗುವುದು. ಮಾರನೆ ದಿನ ಬೆಳಗ್ಗೆಯೇ ಅರಣ್ಯದೊಳಗೆ ಸಫಾರಿ ಹೋಗುವುದೆಂದು ಆ ಮೂರು ದಿನಗಳ ಟೂರನ್ನು ಮುಖ್ಯೋಪಾಧ್ಯಾಯರ ಮುಂದೆ ಅಂತಿಮ ನಿರ್ಧಾರಕ್ಕಾಗಿ ಇರಿಸಿದರು.

ಶಾಲಾ ಪ್ರವಾಸಗಳೆಂದರೆ ಕೇವಲ ದೇವಸ್ಥಾನಗಳು, ಮ್ಯೂಸಿಯಂಗಳು, ಉದ್ಯಾನವನಗಳ ಭೇಟಿಯೆಂದೇ ಭಾವಿಸಿದ್ದ ಹಾಗೂ ಆ ಸೀಮಿತ ಚೌಕಟ್ಟಿನೊಳಗೇ ಯೋಚಿಸುತಿದ್ದ ಮುಖ್ಯೋಪಾಧ್ಯಾಯರಿಗೆ ಈ ರೀತಿಯ ಕಾರ್ಯಕ್ರಮ ಸಂಯೋಜನೆ ವಿಶೇಷವೆನಿಸಿತು. ಹಾಗೂ ಮಕ್ಕಳ ಊಟ-ತಿಂಡಿಗೆ ಏನು ವ್ಯವಸ್ಥೆ ಮಾಡೊಕೊಂಡಿದೀರ್ರೀ? ಎಂದು ವಿಚಾರಿಸಿದರು. ಅಡುಗೆ ಸಾಮಗ್ರಿ ಮತ್ತು ಅಡುಗೆ ಮಾಡಲು ಎರಡು ಜನ ಅಡುಗೆಯವರನ್ನು ಜೊತೆಯಲ್ಲಿ ಕರೆದೊಯ್ದರೆ ನಮಗೆ ಬೇಕಾದ ಶುಚಿ-ರುಚಿಯ ಊಟ ತಿಂಡಿ, ಕಡಿಮೆ ಖರ್ಚಿನಲ್ಲಿ ಮತ್ತು ಫ್ರೆಷ್-ಹೆಲ್ತಿಯಾಗಿಯೂ ಸಿಗುತ್ತೆ. ನಾವು ಮತ್ತು ಮಕ್ಕಳೂ ಸಹ ಅಡುಗೆ ತಯಾರಿಯಲ್ಲಿ, ಬಡಿಸುವುದರಲ್ಲಿ ಸಹಾಯ ಮಾಡುವುದರಿಂದ ಇದೂ ಸಹಾ ಒಂದು ರೀತಿಯ ವಿನೂತನ ಅನುಭವ ನೀಡುತ್ತದೆ ಎಂದು ಇತರೆ ಶಿಕ್ಷಕರೂ ಅನುಮೋದಿಸಿದರು. ಈ ಹಿಂದೆ ಟೂರಿಗೆ ಬರಲು ಹಿಂದೇಟು ಹೊಡೆದಿದ್ದ ಮುಖ್ಯೋಪಾಧ್ಯಾಯರು ಸಹಾ ಈ ಪ್ರವಾಸದಲ್ಲಿನ ಈ ಎಲ್ಲಾ ಥ್ರಿಲ್‌ಗಳ ಕುರಿತು ಕೇಳಿಸಿಕೊಂಡು ತಾವೂ ತಪ್ಪಿಸಿಕೊಳ್ಳದೇ ಭಾಗವಹಿಸಲೇಬೇಕೆಂದು ನಿಂತ ನಿಲುವಲ್ಲೇ ತೀರ್ಮಾನಿಸಿದರು.

ಕಾಡಿನೊಳಗಿನ ನಾಡಿನಲ್ಲಿ ಅಡುಗೆ ಮಾಡಿ ಊಟ ಮಾಡುವುದು, ಟೆಂಟ್ ಹಾಕಿಕೊಂಡು ರಾತ್ರಿ ಕಳೆಯುವುದು, ಮೂರೂ ದಿನ ಹಸಿರಿನ ನಡುವೆಯೇ ಚಿಟ್ಟೆಗಳಂತೆ ವಿಹರಿಸುವ ಸುದ್ದಿ ತಿಳಿದ ಮಕ್ಕಳು ನಾಮುಂದು-ತಾಮುಂದು ಎಂದು ಟೂರಿಗೆ ಹೆಸರು ನೋಂದಾಯಿಸಿದರು.

ಪೀಟೀಮೇಷ್ಟ್ರು ರುದ್ರಮುನಿಯವರು ಟೂರಿಗೆ ಹೊರಟಿರುವ ಮಕ್ಕಳನ್ನು ಒಂದು ಕೊಠಡಿಯಲ್ಲಿ ಕೂರಿಸಿಕೊಂಡು, ನಾವೀಗ ಟೂರಿಗೆ ಹೊರಟಿದ್ದರೂ, ಮೂರೂ ದಿನ ಚಾರಣದ ಹಾಗೆ ಕಾಡುಮೇಡಲ್ಲಿ ನಡೆದಾಡಬೇಕಿರುತ್ತೆ. ಗುಣಮಟ್ಟದ, ಬಳಸಲು ಸರಳವಾಗಿರುವ, ಆರಾಮದಾಯಕವಾಗಿರುವ ಬೂಟುಗಳನ್ನು ಅಂಗಡಿಗಳಲ್ಲಿ ಮಧ್ಯಾಹ್ನದ ನಂತರವೇ ಆಯ್ಕೆ ಮಾಡಿಕೊಳ್ಳಿ. ಆಗ ನಿಮ್ಮ ಪಾದದ ಅಳತೆಗೆ ಸರಿಯಾದ ಆಯ್ಕೆ ಮಾಡಬಹುದು. ಹತ್ತಿಯಿಂದ ತಯಾರಿಸಿದ ಸಾಕ್ಸ್‌ಗಳನ್ನೇ ಬಳಸಿ, ಅವು ಹವಾನಿಯಂತ್ರಣ ಮಾಡುತ್ತವೆ. ಉಸಿರಾಟದ ವ್ಯಾಯಾಮವನ್ನು ದೈನಂದಿನ ಅಭ್ಯಾಸವನ್ನಾಗಿ ಮಾಡಿಕೊಂಡಿರಿ, ಚಾರಣದ ಸಮಯದಲ್ಲಿ ಎತ್ತರವನ್ನು ಏರುವಾಗ ಆಯಾಸವಾಗದಂತೆ ಸಹಕರಿಸುತ್ತದೆ. ಒಂದು ಜೊತೆ ಹಗುರವಾದ ಉಡುಪನ್ನು ಇಟ್ಟುಕೊಂಡಿರುವುದು ಒಳ್ಳೆಯದು. ಬೆನ್ನಿಗೆ ಹಾಕಿಕೊಳ್ಳಲು, ಸುಲಭವಾಗಿ ತೆಗೆಯಲು, ಸರಾಗವಾಗಿ ತೆರೆಯಲು ಆಗುವಂಥ ಬ್ಯಾಗನ್ನೇ ಇಟ್ಟುಕೊಳ್ಳಿ. ನಡೆಯಲು ಕೈಲೊಂದು ಕೋಲಿದ್ದರೆ ನಡಿಗೆ ಸುಲಲಿತವಾಗಿರುತ್ತದೆ. ಆಧಾರವಾಗಿರುವುದರೊಂದಿಗೆ ಎದುರಾಗುವ ಪೊದೆಯನ್ನು, ಮುಳ್ಳುಕಂಟಿಯನ್ನು ಪಕ್ಕಕ್ಕೆ ಹೊರಳಿಸಲು ಹಾಗೇ ನಡಿಗೆಯ ದಾರಿಯನ್ನು ಪರೀಕ್ಷಿಸಲು ಸಹಕಾರಿಯಾಗುತ್ತದೆ. ಆಗಾಗ ಲವಣಯುಕ್ತ ನೀರನ್ನು ಗುಟುಕರಿಸುವುದರ ಜೊತೆಗೆ ದೇಹದ ಇತರೆ ಅಗತ್ಯಗಳಿಗೆ ಸ್ಪಂದಿಸುವುದು ಸಹಾ ಅತ್ಯಗತ್ಯ. (ಮುಂದುವರಿಯುವುದು)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248